ಅಸಲು ದಾವಾ ನಂಃ 22/2023
ಡಿ ಡಬ್ಲ್ಯುಃ1

<u>ದಿನಾಂಕಃ **05-02-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>
<u>ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಮುಖ್ಯ ವಿಚಾರಣೆ ಮಾಡಲು ಅನುಮತಿಯನ್ನು ನೀಡಲಾಯಿತು.</u>

<u>ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎನ್ ಎಸ್ ವಕೀಲರಿಂದಃ</u>

ನನ್ನ ಯಜಮಾನರು ತೀರಿಕೊಂಡು 14 ವರ್ಷ ಆಗಿರುತ್ತದೆ. ನಾನು ಮದುವೆಯಾಗಿ ನನ್ನ ಗಂಡನ ಮನೆಗೆ ಬಂದು 65 ವರ್ಷ ಆಗಿರುತ್ತದೆ. ದಾವಾ ಆಸ್ತಿಗಳು ನನ್ನ ಗಂಡನಿಗೆ ಅವರ ತಂದೆಯಿಂದ ಬಂದಿರುತ್ತದೆ ಎಂದರೆ ಸರಿ. ನನ್ನ ಗಂಡ ಜೀವಂತ ಇದ್ದಾಗ ದಾವಾ ಆಸ್ತಿಗಳು ವಿಭಾಗ ಆಗಿರಲಿಲ್ಲ ಎಂದರೆ ಸಾಕ್ಷಿ ವಿಭಾಗ ಆಗಿತ್ತು ಎಂದು ಉತ್ತರಿಸತ್ತಾರೆ. ನನ್ನ ಗಂಡ ಜೀವಂತ ಇದ್ದಾಗ ವಿಭಾಗ ಮಾಡಿಕೊಂಡ ಬಗ್ಗೆ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. 2020 ರಲ್ಲಿ ನಾನು, ನನ್ನ ಮಕ್ಕಳೆಲ್ಲರು ಸೇರಿ ನೋಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿ ನನಗೆಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವಿಭಾಗ ಪತ್ರದಲ್ಲಿ ನನ್ನ ಮಗಳಿಗೆ ಆಸ್ತಿಯ ಬದಲಿಗೆ ಹಣ ಕೊಡುವ ಬಗ್ಗೆ ನಮೂದು ಆಗಿದೆ ಎಂದರೆ ಸರಿ. ಸ್ಥಿರಾಸ್ತಿಗಳನ್ನು ನನಗೆ ಮತ್ತು ನನ್ನ ಇಬ್ಬರು ಗಂಡು ಮಕ್ಕಳಿಗೆ ಎಂದು ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನಾವು ಸದರಿ ವಿಭಾಗ ಪತ್ರ ಮಾಡಿಕೊಳ್ಳುವ ಕಾಲಕ್ಕೆ ಚೆನ್ನಾಗಿ ಇದ್ದು ಹೊಂದಾಣಿಕೆಯ ಮೇರೆಗೆ ಮಾಡಿಕೊಂಡಿರುತ್ತೇವೆ ಎಂದರೆ ಸರಿ.

2. ವಿಭಾಗ ಪತ್ರದ ಆಧಾರ ಮೇಲೆ ಅವರವರ ಹೆಸರಿಗೆ ಖಾತೆ ಪಹಣಿ ಬಂದಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಾನು ನನ್ನ ಮಕ್ಕಳನ್ನು ವಿಭಾಗ ಪತ್ರದ ಆಧಾರ ಮೇಲೆ ಖಾತೆ ಬದಲಾವಣೆಯಾದ ಬಗ್ಗೆ ನಾನು ವಿಚಾರ ಮಾಡಿರುವುದಿಲ್ಲ. 1 ನೇ ಪ್ರತಿವಾದಿ ತನಗೆ ಬಂದ ಅರ್ಧ ಎಕರೆ ಜಮೀನಿನಲ್ಲಿ ಸುತ್ತಲೂ ತಂತಿ ಬೇಲಿ ಹಾಕಿ ಬಾವಿ ತೆಗೆಸಿ ಅಡಿಕೆ ಮತ್ತು ಬಾಳೆ ಹಾಕಿದ್ದರು ಎಂದರೆ ಸರಿ. ಸದರಿ ತೋಟದಲ್ಲಿ ಜೆಟ್ ಹಾಕಿ ನೀರನ್ನು ಬಳಸುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ತೋಟದಲ್ಲಿ ಅಡಿಕೆ ಮತ್ತು ಬಾಳೆ ಚೆನ್ನಾಗಿ ಬಂದಿತ್ತು ಎಂದರೆ ಸರಿ. ಈಗ ಸದರಿ ತೋಟ ಹಾಳಾಗಿರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಗೆ 17 ಗುಂಟೆ ಜಮೀನಿಗೆ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹೋಗವ ದಾರಿಯಲ್ಲಿ ಕಾರ್ ಶೆಡ್ ಇದ್ದು ಅದು ನಮಗೆ ಸಂಬಂಧಿಸಿದ್ದು ಇರುತ್ತದೆ. ಸದರಿ ಕಾರ್ ಶೆಡ್ಡನ್ನು ನಾವು ತೆಗೆಯುತ್ತೀವಿ ಎಂದು ಹೇಳಿದ್ದೀವಿ ಎಂದರೆ ಸಾಕ್ಷಿ ಮುಂದುವರೆದು

ಅಲ್ಲಿ ದಾರಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಕಾರ್ ಶೆಡ್ ಇದುವರೆಗೆ ತೆಗೆದಿರುವುದಿಲ್ಲ ಎಂದರೆ ಸರಿ.

3. ವಿಭಾಗದ ಪತ್ರದ ಅಂಶಗಳನ್ನು ನಮಗೆ ಓದಿ ಹೇಳಿರುತ್ತಾರೆ ಸಾಕ್ಷಿ ಮುಂದುವರೆದು ಅದರಲ್ಲಿ ತಪ್ಪಾಗಿರುದು ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ವಿಭಾಗ ಪತ್ರ ತಪ್ಪಾಗಿರುವ ಬಗ್ಗೆ ತಿದ್ದುಪಡಿ ಪತ್ರ ಮಾಡಲು ಹೋಗಿರುವುದಿಲ್ಲ ಎಂದರೆ ಅವರು ಅದು ತಪ್ಪಾಗಿರುವುದು ಗೊತ್ತಾಗಿರಲಿಲ್ಲ ಎಂದು ಉತ್ತರಿಸುತ್ತಾರೆ. ಮೂಲ ದಾವೆ ಸಂಖ್ಯೆ 12/2022 ಏಕೆ ಹಾಕಿದ್ದೀರಿ ಎಂಬ ಬಗ್ಗೆ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಅದಲು ಬದಲು ಆದ ಸಂಬಂಧ ಹಾಕಿದ್ದೀವಿ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಅದರ ಬಗ್ಗೆ ಗೊತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ಹಿಸ್ಸಾ ಪತ್ರ ಆಗುವ ಕಾಲಕ್ಕೆ 1 ನೇ ಪ್ರತಿವಾದಿ ನಮ್ಮ ಜೊತೆ ವಾಸ ಇದ್ದರು ನಮ್ಮ ಮಗಳು ಚಿಕ್ಕಮಗಳೂರಿನಲ್ಲಿ ವಾಸ ಇದ್ದರು. ನನ್ನ ಮಗಳ ಗಂಡ ಕೆ ಎಸ್ ಆರ್ ಟಿ ಸಿ ಯಲ್ಲಿ ಕಂಡಕ್ಟರ್ ಆಗಿದ್ದಾರೆ. ವಿಭಾಗ ಪತ್ರ ಆಗುವ ಕಾಲಕ್ಕೆ ಅವರು ಇರಲಿಲ್ಲ ಎಂದರೆ ಸರಿ.

4. ನನ್ನ ಮಗಳನ್ನು ಪುತ್ತೂರಿನ ಸುಳ್ಯಾಕ್ಕೆ ಕೊಟ್ಟು ಅವರ ಮನೆಯಿಂದ ನನ್ನ ಮಗನಿಗೆ ಹೆಣ್ಣನ್ನು ತಂದಿರುತ್ತೇವೆ ಎಂದರೆ ಸರಿ. ನನ್ನ ಮಗಳು ಮದುವೆ ಆದ ನಂತರ ಒಂದು ವರ್ಷ ಕಾಲ ಸುಳ್ಯಾದಲ್ಲಿ ವಾಸ ಇದ್ದರು. ನನ್ನ ಮಗಳ ಮನೆಯವರು ಸ್ಥಿತಿವಂತರು ಇದ್ದರು ಎಂದರೆ ಸರಿ. ನನ್ನ ಮಗಳ ಅತ್ತೆಯನ್ನು ಈಗ 2 ನೇಯವರೆ ನೋಡಿಕೊಳ್ಳುತ್ತಾ ಇರುತ್ತಾರೆ. ನನ್ನ ಮಗಳ ಅತ್ತೆ ಬಂದು ಈಗ 2 ತಿಂಗಳು ಆಗಿರುತ್ತದೆ. ನಾವು ಆಸ್ತಿಗಳನ್ನು ಮೂಲ ದಾವಾ ಸಂಖ್ಯೆ 12/2022 ನ್ನು ಅದಲುಬದಲು ಮಾಡಿಕೊಳ್ಳುವ ಕಾಲಕ್ಕೆ ರಾಜಿ ಆಗಿತ್ತು ಆ ಕಾಲಕ್ಕೆ ನನ್ನ ಮೊಮ್ಮಗ ಮತ್ತು ಸೊಸೆಗೆ ತಿಳಿಸಿಲ್ಲ ಎಂದರೆ ಸಾಕ್ಷಿ ಅವರ ಅವಶ್ಯಕತೆ ಇರಲಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ದಾವೆಯಲ್ಲಿ ನನ್ನ ಮೊಮ್ಮಗ ಮತ್ತು ಸೊಸೆಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

5. ನನ್ನ ಪಾಲಿಗೆ ಬಂದ ಆಸ್ತಿಯನ್ನು ನಾನು ಮರಣ ಶಾಸನ ಮಾಡಿರುತ್ತೇನೆ ಎಂದರೆ ಸಾಕ್ಷಿ ಹೌದಾ ಎಂದು ಉತ್ತರಿಸುತ್ತಾರೆ.

ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಯಿತು.

<u>ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

6. 1 ನೇ ಪ್ರತಿವಾದಿ ಮತ್ತು ವಾದಿಯರು ಈಗ ಒಟ್ಟಿಗೆ ವಾಸ ಇರುತ್ತಾರೆ. 1 ನೇ ಪ್ರತಿವಾದಿ ತನ್ನ ಪಾಲಿಗೆ ಬಂದ ಆಸ್ತಿಯ ಮೇಲೆ ಲೋನ್ ಪಡೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 1 ನೇ ಪ್ರತಿವಾದಿ ನನ್ನ ಮತ್ತು ನನ್ನ ಮಗಳ ಚಿತಾವಣೆಯ ಮೇರೆಗೆ ಲೋನ್ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಲೋನ್ ತೆಗೆಯುವ ವಿಚಾರ ವಾದಿಯರಿಗೆ ಗೊತ್ತಿರಲಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಹಿಸ್ಸಾ ಪತ್ರದ ಪ್ರಕಾರ ಸರ್ವೆ ನಂಬರ್ 139 ರಲ್ಲಿ ಇರುವ ಮನೆಯ ಪಶ್ಚಿಮ ದಿಕ್ಕಿನ ಅರ್ಧ ಭಾಗ 1 ನೇ ಪ್ರತಿವಾದಿಗೆ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮನೆಯಲ್ಲಿ ನಮಗೆ ಮತ್ತು 1 ನೇ ಪ್ರತಿವಾದಿಗೆ ತಲಾ ಅರ್ಧ ಹಿಸ್ಸೆಯಂತೆ ವಿಭಾಗ ಆಗಿತ್ತು ಎಂದರೆ ಸಾಕ್ಷಿ ಅವರು ಹೇಳುತ್ತಾರೆ ಆದರೆ ಮನೆಯೇ ಬಿದ್ದು ಹೋಗುವ ಸ್ಥಿತಿಯಲ್ಲಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ಮನೆಯಲ್ಲಿ ನಾನು ಈಗ ವಾಸ ಇರುತ್ತೇನೆ ಎಂದರೆ ಸರಿ. ಸದರಿ ಮನೆಯಲ್ಲಿ ನನ್ನ ಮಗ ಮತ್ತು ಅವರ ಹೆಂಡತಿ ಮಕ್ಕಳು ಮದುವೆ ಆದಾಗಿನಿಂದ ವಾಸ ಇದ್ದರು ಎಂದರೆ ಸಾಕ್ಷಿ ಸ್ವಲ್ಪ ದಿನ ಇದ್ದರು ಈಗ ಅವರ ತವರು ಮನೆಯಲ್ಲಿ ಇರುತ್ತಾರೆ ಎಂದು ಉತ್ತರಿಸುತ್ತಾರೆ.

7. ಎರಡನೇ ವಾದಿಯ ತವರು ಮನೆ ಪುತ್ತೂರು ಬಳಿ ಇರುತ್ತದೆ. 2 ನೇ ವಾದಿ 26 ವರ್ಷಗಳಿಂದ ಅಂಗನವಾಡಿ ಕಾರ್ಯಕರ್ತೆ ಎಂದು ಕೆಲಸ ಮಾಡುತ್ತಾರೆ ಎಂದರೆ ಸಾಕ್ಷಿ 10-20 ವರ್ಷಗಳಿಂದ ಕೆಲಸ ಮಾಡುತ್ತಾರೆ ಎಂದು ಉತ್ತಾರಿಸುತ್ತಾರೆ. ನನ್ನ ಮಗ ಮತ್ತು 2 ನೇ ವಾದಿ ಕೆಲಸಕ್ಕೆ ಅದೇ ಮನೆಯಿಂದ ಹೋಗುತ್ತಾರೆ ಎಂದರೆ ಸಾಕ್ಷಿ ಮೊದಲು ಹೋಗುತ್ತಿದ್ದರು ಎಂದು ಉತ್ತಾರಿಸುತ್ತಾರೆ ಹಾಗೂ ಈಗ ಅವರ ಜೊತೆ ಇರುತ್ತಾರೆ ಎಂದು ಉತ್ತಾರಿಸುತ್ತಾರೆ. ನನ್ನ ಮಗ ವಾದಿಯರ ಜೊತೆ ಹೋಗಿ ಈಗ 2 ವರ್ಷ ಆಗಿರುತ್ತದೆ. ಸಾಕ್ಷಿ ಮುಂದುವರೆದು ಈಗಲೂ ಅಪರೂಪಕ್ಕೆ ಬಂದು ಹೋಗುತ್ತಾರೆ. ನನ್ನ ಅಳಿಯ ಮನೆ ತೆಗೆದುಕೊಳ್ಳುವಾಗ 2 ನೇ ವಾದಿ ತಮ್ಮ ಬಂಗಾರ ಅಡ ಇಟ್ಟು ರೂ.75 ಸಾವಿರ ಹಣವನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಅದು ಅವರ ವ್ಯವಹಾರ ನನಗೆ ಗೊತ್ತಿಲ್ಲ ಎಂದು ಉತ್ತಾರಿಸುತ್ತಾರೆ.

8. 2020 ರ ಹಿಸ್ಸಾ ಪತ್ರದಲ್ಲಿ ಬಂದ ಆಸ್ತಿಯಲ್ಲಿ ವಾದಿಯರಿಗೆ ಹಕ್ಕು ಇರುತ್ತದೆ ಎಂದರೆ ಸಾಕ್ಷಿ ಅವರಿಗೆ ಕೊಟ್ಟಿದ್ದೆವು ಇರಬಹುದು ಎಂದು ಉತ್ತಾರಿಸುತ್ತಾರೆ. ವಾದಿಯರಿಗೆ ಹಕ್ಕು ಇರುವ ವಿಚಾರ ಗೊತ್ತಿದ್ದರೂ ಸಹ ಅವರಿಗೆ ಮೋಸ ಮಾಡುವ ಸಲುವಾಗಿ ನಾವು ಮೂಲ ದಾವೆ ಸಂಖ್ಯೆ 12/2022 ನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬ್ಯಾಂಕ್ ನಲ್ಲಿ ಲೋನ್ ಮಾಡಿದ ಹಣವನ್ನು ನಾವು ಪಡೆದುಕೊಂಡು ಸದರಿ ಆಸ್ತಿ ಹರಾಜಿನಲ್ಲಿ ಹೋಗಬೇಕೆನ್ನುವ ಇರಾದೆಯನ್ನು ನಾವು ಹೊಂದಿದ್ದೆವು ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ನಾವು ವಾದಿಯರಿಗೆ ಸದರಿ ಲೋನ್ ವಿಚಾರ ಮತ್ತು ಮೂಲ ದಾವೆ ಸಂಖ್ಯೆ 12/2022 ರ ವಿಚಾರಗಳನ್ನು ಅವರಿಗೆ ಮುಚ್ಚಿಟ್ಟಿರುತ್ತೇವೆ ಎಂದರೆ ಸರಿಯಲ್ಲ. ವಾದಿಯ ವಾಸ ಇರುವ ಮನೆ ಶೀತಲಾವಸ್ಥೆಯಲ್ಲಿದ್ದು ಅದನ್ನ ರಿಪೇರಿ ಮಾಡಲು ನಾವು ಬಿಡುತ್ತಿಲ್ಲ ಎಂದರೆ ಸಾಕ್ಷಿ ನಾವು ಕೊಡುವುದಿಲ್ಲ ಎಂದು ಉತ್ತಾರಿಸುತ್ತಾರೆ. 1 ನೇ ಪ್ರತಿವಾದಿ ಆಸ್ಪತ್ರೆಗೆ ಸೇರಿದಾಗ ನಾನು, ನನ್ನ ಮಗ ಮತ್ತು ಮಗಳು ಯಾವುದೇ ಖರ್ಚು ವೆಚ್ಚಗಳನ್ನು ನೋಡಿಕೊಂಡಿಲ್ಲ ಎಂದರೆ ಸಾಕ್ಷಿ ನಮಗೆ ಕೊಡಲು ಇರುವುದಿಲ್ಲ ಮತ್ತು ಅವರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದಿತ್ತು ಎಂದು ಉತ್ತಾರಿಸುತ್ತಾರೆ.

9. ನಾವು ವಾದಿಯರನ್ನು ಮತ್ತು 1 ನೇ ಪ್ರತಿವಾದಿಯನ್ನು ಬೀದಿಗೆ ತರಬೇಕೆನ್ನುವ ಉದ್ದೇಶವನ್ನು ಹೊಂದಿರುತ್ತೇವೆ ಎಂದರೆ ಸರಿಯಲ್ಲ. ನಾವು ಮೋಸ ಮಾಡುವ ಸಲುವಾಗಿ ವಾದಿಯರಿಗೆ ತಿಳಿಯದ ಹಾಗೆ ಮೂಲ ದಾವೆ ಸಲ್ಲಿಸಿ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾವು ವಾದಿಯರ ಆರ್ಥಿಕ ಭದ್ರತೆ ಮಾಡಿಕೊಳ್ಳು ಹೋದರೆ ನಾವು ಅವರಿಗೆ ತೊಂದರೆ ಆಗಿರುತ್ತೇವೆ ಎಂದರೆ ಸರಿಯಲ್ಲ. ಸದರಿಯವರ ತಮ್ಮ ಜಮೀನನ್ನು ಅಭಿವೃದ್ಧಿ ಪಡಿಸಲು ನಾವೆ ತೊಂದರೆಯನ್ನುಂಟು ಮಾಡಿರುತ್ತೇವೆ ಎಂದರೆ ಸರಿಯಲ್ಲ.

10. ಹಿಸ್ಸಾ ಪತ್ರದ ಪ್ರಕಾರ ಅವರ ಆಸ್ತಿಗಳನ್ನು ಮಾಡಿಕೊಳ್ಳಲು ನಿಮ್ಮದು ತಕರಾರು ಇದೆಯೇ ಎಂದರೆ ಸಾಕ್ಷಿ ಸರಿಸಮ ಪಾಲು ನಮ್ಮದು ಬಂದರೆ ತಕರಾರು ಇಲ್ಲ ಎಂದು ಉತ್ತಾರಿಸುತ್ತಾರೆ. 2020 ರ ಹಿಸ್ಸಾ ಪತ್ರ ಎಲ್ಲರ ಅನುಕೂಲಕ್ಕೆ ತಕ್ಕಂತೆ ಹಿರಿಯರ ಸಮಕ್ಷಮ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನಗೆ ಗೊತ್ತಿರುವುದಿಲ್ಲ ಎಂದು ಉತ್ತಾರಿಸುತ್ತಾರೆ. ವಾದಿಯರು ವಾಸ ಇರುವ ಮನೆಯ ಕರೆಂಟ್ ಬಿಲ್ಲನ್ನು ಅವರೇ ಕಟ್ಟುತ್ತಾ ಇರುತ್ತಾರೆ ಎಂದರೆ ಸಾಕ್ಷಿ ನಮಗೂ ಅದಕ್ಕೂ ಸಂಬಂಧ ಇಲ್ಲ ಎಂದು

ಉತ್ತಾರಿಸುತ್ತಾರೆ. ವಾದಿಯರಿಗೆ ಬಂದ ಮನೆಯನ್ನು ಕಬಳಿಸುವ ಸಲುವಾಗಿ ದಾಖಲೆ ನೋಡಿ ಡಿಕ್ರಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು 1 ನೇ ಪ್ರತಿವಾದಿಯನ್ನು ಕರೆದುಕೊಂಡು ಹೋಗಿ ಸಾಲ ಮಾಡುವುದು ಮತ್ತು ರಿನಿವಲ್ ಮಾಡುವುದು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನನಗೆ ಈ ಎಲ್ಲಾ ವಿಚಾರಗಳು ಗೊತ್ತಿದ್ದರುೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ